H

# ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ

ಕಾಯಕವೇ ಕೈಲಾಸ
J.S.S. MAHA VIDYAPEETHA

ಜಗದ್ಗುರು ಡಾ|| ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು–570 004

ವಿಭಾಗ ...ಸ್ನಾತಕೋತ್ತರ (ಕನ್ನಡ).........

20 – 20

12-01-2019

ವಿಷಯ : ಜಾಣ-ಜಾಣೆಯರ ಬಳಗವು ಆಯೋಜಿಸಿದ್ದ "ಸಾಹಿತಿಯೊಂದಿಗೆ ಸಂವಾದ" ಕಾರ್ಯಕ್ರಮದ ಉದ್ಘಾಟನೆ

..................................................

**JSS ENTERPRISES**
**JSS Public School Campus**
**Dr. S. Radha Krishna Nagara**
**Teachers Layout, Mysuru-570 029**

ಜಾಣ - ಜಾಣೆಯರ ಬಳಗವು ಹಮ್ಮಿಕೊಂಡಿದ್ದ
ಸಾಹಿತಿಯೊಂದಿಗೆ ಸಂವಾದ ಕಾರ್ಯಕ್ರಮದ ಉದ್ಘಾಟನೆ.
12-01-2019



ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ)
ಬಿ.ಎನ್. ರಸ್ತೆ, ಮೈಸೂರು –570025
ನ್ಯಾಕ್‌ನಿಂದ 'ಎ ದರ್ಜೆ ಮಾನ್ಯತೆ ಪಡೆದಿದೆ
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

: 0821-2548236, 2548380 Fax: 0821-2548238 e-mail: jssautonomous@gmail.com

ದಿನಾಂಕ 12.1.2019

## ಪ್ರಕಟಣೆಯ ಕೃಪೆಗಾಗಿ

## ಸಾಹಿತ್ಯವು ಹರಿಯುವ ಜೀವನದಿ ಇದ್ದಂತೆ

– ಡಾ. ಎಸ್. ಪಿ. ಉಮಾದೇವಿ

"ಜೀವನಾನುಭವಗಳನ್ನು ಹೊಂದಿರುವಂಥದ್ದು ಸಾಹಿತ್ಯ. ಜೀವನ ಹೇಗೆ ಸದಾ ಹೊಸತನ, ಆಧುನೀಕತೆಯತ್ತ ಸಾಗುತ್ತದೋ ಅಂತೆಯೇ ಸಾಹಿತ್ಯವೂ ಸಾಗುತ್ತದೆ. ಆದ್ದರಿಂದ ಸಾಹಿತ್ಯ ನಿಂತ ನೀರಲ್ಲ. ಅದು ಹರಿಯುವ ಜೀವನದಿ ಇದ್ದಂತೆ" ಎಂದು ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಹ ಪ್ರಾಧ್ಯಾಪಕರೂ, ಸಾಹಿತಿಗಳೂ ಆದ ಡಾ. ಎಸ್.ಪಿ. ಉಮಾದೇವಿಯವರು ಅಭಿಪ್ರಾಯಪಟ್ಟರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ – ಜಾಣೆಯರ ಬಳಗವು ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಸಾಹಿತಿಯೊಂದಿಗೆ ಸಂವಾದ' ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ಪಾಲ್ಗೊಂಡು ಭಾಷೆ, ಸಾಹಿತ್ಯ, ಸಂಸ್ಕೃತಿ, ಮಾಧ್ಯಮ ಇವುಗಳನ್ನು ಕುರಿತು ಚರ್ಚಿಸಿದರು. "ಪ್ರತಿಭೆ ಪ್ರತಿಯೊಬ್ಬರಲ್ಲಿಯೂ ಇರುತ್ತದೆ. ಅದನ್ನು ಅಭಿವ್ಯಕ್ತಿಸುವ ಕಲೆ ಮತ್ತು ವಿಧಾನವನ್ನು ರೂಢಿಸಿಕೊಳ್ಳಬೇಕು. ನಮ್ಮ ಸಂಸ್ಕೃತಿ ನಮ್ಮ ಭಾಷೆ ಸೃಜನಶೀಲತೆಗೆ ಉತ್ತಮ ಅವಕಾಶಗಳನ್ನು ಒದಗಿಸುತ್ತದೆ. ಅನೇಕ ದೇಶಗಳನ್ನು ನೋಡಿ ಬಂದಿದ್ದರೂ ನಮ್ಮ ಸಂಸ್ಕೃತಿಯಂತಹ ಶ್ರೀಮಂತಿಕೆ ಬೇರೆಲ್ಲೂ ನನಗೆ ಕಾಣಿಸಲಿಲ್ಲ. ಆದ್ದರಿಂದ ನಮ್ಮ ಸಂಸ್ಕೃತಿ ಮತ್ತು ನಮ್ಮ ಭಾಷೆಯನ್ನು ಗೌರವಿಸಿ. ನನ್ನನ್ನು ಓರ್ವ ಸಾಹಿತಿಯಾಗಿ ರೂಪಿಸುವಲ್ಲಿ ನಾನು ಹುಟ್ಟಿ ಬೆಳೆದ ಸುತ್ತೂರು ಪ್ರಮುಖ ಪಾತ್ರ ವಹಿಸಿದೆ. ಮಾಧ್ಯಮಗಳಿಂದ ಕಲಿಯುವುದು ಬಹಳಷ್ಟಿರುತ್ತದೆ. ಒಳ್ಳೆಯದನ್ನು ಮಾತ್ರವೇ ನಾವು ಆರಿಸಿಕೊಳ್ಳಬೇಕು" ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು "ಒಬ್ಬ ಲೇಖಕ ಅಥವ ಲೇಖಕಿಯೊಂದಿಗೆ ಚರ್ಚಿಸುವುದೆಂದರೆ ಹೆಚ್ಚು ಕಡಿಮೆ ಅವರ ಎಲ್ಲಾ ಕೃತಿಗಳ ಒಟ್ಟು ಸಾರವನ್ನು ನೀವು ಗ್ರಹಿಸಿದಂತೆಯೇ. ಅದರ ಜೊತೆಗೆ ಅವರ ಸಾಹಿತ್ಯವನ್ನು ಪ್ರಸ್ತುತತೆಗೆ ಮುಖಾಮುಖಿಯಾಗಿಸಿ ನೋಡುವ, ವಿಮರ್ಶಿಸುವ ಕೆಲಸವೂ ಸಾಗುತ್ತದೆ. ಉಮಾದೇವಿಯವರು ಪಂಥಾತೀತವಾಗಿ ಸಾಹಿತ್ಯ ರಚಿಸುತ್ತಾ, ಸಮಾಜದ ಒಳಗೆ ಸ್ತ್ರೀ ಪುರುಷರ ಕೊಡುಗೆಯನ್ನು ಸಮಾನವಾಗಿ ಕಂಡು ಅಭಿವ್ಯಕ್ತಿಸುತ್ತಾ ಬರುತ್ತಿದ್ದಾರೆ. ಮಹಿಳಾ ಸಾಹಿತ್ಯವೂ ಇಂದು ಸ್ಪಷ್ಟವಾಗಿ ಬೆಳೆಯುತ್ತಿದೆ. ಹೆಣ್ಣು ಮಕ್ಕಳು ಇಂದು ಹೆಚ್ಚಿನ ಮಟ್ಟದ ಶಿಕ್ಷಣ ಪಡೆಯುತ್ತಿರುವುದರಿಂದ ಅವರು ಅಭಿವ್ಯಕ್ತಿ ಮಾಧ್ಯಮದಲ್ಲಿ ತೊಡಗಿಸಿಕೊಳ್ಳಬೇಕು" ಎಂದು ಕರೆಕೊಟ್ಟರು.

ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎಸ್. ಸುದೀಪ್ ಪ್ರಾಸ್ತಾವಿಕ ಮಾತುಗಳನ್ನಾಡಿ ಸ್ವಾಗತ ಕೋರಿದರು. ಕು. ಜ್ಯೋತಿ ಎನ್. ಭಟ್ ಪ್ರಾರ್ಥಿಸಿದರು. ಶ್ರೀ ಅಕ್ಷಯ ದೇವರು ವಂದಿಸಿದರು. ಶ್ರೀ ಎಚ್.ಎಂ. ಮಲ್ಲಿಕಾರ್ಜುನ ನಿರೂಪಿಸಿದರು. ಅಧ್ಯಾಪಕರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಸಂವಾದದಲ್ಲಿ ಪಾಲ್ಗೊಂಡರು.

ಸಂಪಾದಕರು

---------------

ಪ್ರಾಂಶುಪಾಲರು
ಪ್ರಾಂಶುಪಾಲರು
ಜೆ.ಎಸ್.ಎಸ್. ಕಾಲೇಜು
ಬಿ.ಎನ್. ರಸ್ತೆ, ಮೈಸೂರು-570 025

ಉದಯವಾಣಿ 13-01-2019

# ಬೇರೆಲ್ಲೂ ಸಿಗದ ನಮ್ಮ ಸಂಸ್ಕೃತಿ, ಭಾಷೆ ಗೌರವಿಸಿ

## ಸಾಹಿತ್ಯವೂ ಹರಿಯುವ ಜೀವನದಿ ಇದ್ದಂತೆ: ಡಾ.ಎಸ್.ಪಿ.ಉಮಾದೇವಿ



ಜೆಎಸ್ ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ-ಜಾಣೆಯರ ಬಳಗವು ಹಮ್ಮಿಕೊಂಡಿದ್ದ ಸಾಹಿತಿಯೊಂದಿಗೆ ಸಂವಾದ ಕಾರ್ಯಕ್ರಮವನ್ನು ಸಾಹಿತಿ ಡಾ.ಉಮಾದೇವಿ ಉದ್ಘಾಟಿಸಿದರು.

**ಮೈಸೂರು:** ಸಾಹಿತ್ಯ ನಿಂತ ನೀರಲ್ಲ. ಅದು ಹರಿಯುವ ಜೀವನದಿ ಇದ್ದಂತೆ ಎಂದು ಜೆಎಸ್ ಎಸ್ ಮಹಿಳಾ ಕಾಲೇಜಿನ ಸಹ ಪ್ರಾಧ್ಯಾಪಕರಾದ ಸಾಹಿತಿ ಡಾ.ಎಸ್.ಪಿ. ಉಮಾದೇವಿ ಹೇಳಿದರು.

ನಗರದ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ-ಜಾಣೆಯರ ಬಳಗವು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಸಾಹಿತಿಯೊಂದಿಗೆ ಸಂವಾದ' ಕಾರ್ಯಕ್ರಮವನ್ನು ಉದ್ಘಾಟಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಪ್ರತಿಯೊಬ್ಬರಲ್ಲಿಯೂ ಪ್ರತಿಭೆ ಇರುತ್ತದೆ. ಅದನ್ನು ಅಭಿವ್ಯಕ್ತಿಸುವ ಕಲೆ ಮತ್ತು ವಿಧಾನವನ್ನು ರೂಢಿಸಿಕೊಳ್ಳಬೇಕು. ನಮ್ಮ ಸಂಸ್ಕೃತಿ, ನಮ್ಮ ಭಾಷೆ ಸೃಜನಶೀಲತೆಗೆ ಉತ್ತಮ ಅವಕಾಶಗಳನ್ನು ಒದಗಿಸುತ್ತದೆ. ಅನೇಕ ದೇಶಗಳನ್ನು ನೋಡಿ ಬಂದಿದ್ದರೂ ನಮ್ಮ ಸಂಸ್ಕೃತಿಯಂತಹ ಶ್ರೀಮಂತಿಕೆ ಬೇರೆಲ್ಲೂ ನನಗೆ ಕಾಣಿಸಲಿಲ್ಲ. ಆದ್ದರಿಂದ ನಮ್ಮ ಸಂಸ್ಕೃತಿ ಮತ್ತು ನಮ್ಮ ಭಾಷೆಯನ್ನು ಗೌರವಿಸಿ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಮಾತನಾಡಿ, ಒಬ್ಬ ಲೇಖಕ ಅಥವಾ ಲೇಖಕಿಯೊಂದಿಗೆ ಚರ್ಚಿಸುವುದೆಂದರೆ ಹೆಚ್ಚು ಕಡಿಮೆ ಅವರ ಎಲ್ಲಾ ಕೃತಿಗಳ ಒಂದು ಸಾರವನ್ನು ನೀವು ಗ್ರಹಿಸಿದಂತೆಯೇ. ಅದರ ಜೊತೆಗೆ ಅವರ ಸಾಹಿತ್ಯವನ್ನು ಪ್ರಸ್ತುತತೆಗೆ ಮುಖಾಮುಖಿ ಯಾಗಿಸಿ ನೋಡುವ, ವಿಮರ್ಶಿಸುವ ಕೆಲಸವೂ ಸಾಗುತ್ತದೆ. ಉಮಾದೇವಿಯವರು ಪಂಥಾತೀತ ವಾಗಿ ಸಾಹಿತ್ಯ ರಚಿಸುತ್ತಾ, ಸಮಾಜದ ಏಳ್ಗೆಗೆ ಸ್ತ್ರೀ ಪುರುಷರ ಕೊಡುಗೆಯನ್ನು ಸಮಾನವಾಗಿ ಕಂಡು ಅಭಿವ್ಯಕ್ತಿಸುತ್ತಾ ಬರುತ್ತಿದ್ದಾರೆ. ಮಹಿಳಾ ಸಾಹಿತ್ಯವೂ ಇಂದು ಉತ್ಕೃಷ್ಟವಾಗಿ ಬೆಳೆಯುತ್ತಿದೆ. ಹೆಣ್ಣು ಮಕ್ಕಳು ಇಂದು ಹೆಚ್ಚಿನ ಮಟ್ಟದ ಶಿಕ್ಷಣ ಪಡೆಯುತ್ತಿರುವುದರಿಂದ ಅವರು ಅಭಿವ್ಯಕ್ತಿ ಮಾಧ್ಯಮದಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ. ಮಹದೇವಪ್ಪ ಉಪಸ್ಥಿತರಿದ್ದರು.

ಪ್ರಜಾನುಡಿ 13-01-2019

# ಸಾಹಿತ್ಯ ಹರಿಯುವ ಜೀವನದಿ

**ಮೈಸೂರು:** ಜೀವನಾನುಭವಗಳನ್ನು ಹೊಂದಿರುವಂಥದ್ದು ಸಾಹಿತ್ಯ, ಜೀವನ ಹೇಗೆ ಸದಾ ಹೊಸತನ, ಆಧುನೀಕತೆಯತ್ತ – ಸಾಗುತ್ತದೋ ಅಂತೆಯೇ ಸಾಹಿತ್ಯವೂ ಸಾಗುತ್ತದೆ. ಆದ್ದರಿಂದ ಸಾಹಿತ್ಯ ನಿಂತ ನೀರಲ್ಲ. 'ಅದು ಹರಿಯುವ ಜೀವನದಿ ಇದ್ದಂತೆ' ಎಂದು ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು ಸಹ ಪ್ರಾಧ್ಯಾಪಕಿ ಡಾ. ಎಸ್.ಪಿ. ಉಮಾದೇವಿಯವರು ಅಭಿಪ್ರಾಯಪಟ್ಟರು.

ಬಿ.ಎನ್. ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ – ಜಾಣೆಯರ ಬಳಗ ಕರ್ನಾಟಕ ಪುಸ್ತಕ ಪ್ರಾಧಿಕಾರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಸಾಹಿತಿಯೊಂದಿಗೆ ಸಂವಾದ' ಕಾರ್ಯಕ್ರಮ ಉದ್ಘಾಟಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದದಲ್ಲಿ ಪಾಲ್ಗೊಂಡು ಭಾಷೆ, ಸಾಹಿತ್ಯ, ಸಂಸ್ಕೃತಿ, ಮಾಧ್ಯಮ ಇವುಗಳನ್ನು ಕುರಿತು ಚರ್ಚಿಸಿದರು. 'ಪ್ರತಿಭೆ ಪ್ರತಿಯೊಬ್ಬರಲ್ಲೂ ಇರುತ್ತದೆ. ಅದನ್ನು ಅಭಿವ್ಯಕ್ತಿಸುವ ಕಲೆ ಮತ್ತು ವಿಧಾನವನ್ನು ರೂಢಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ.



ಸಾಂಬಶಿವಯ್ಯನವರು ಒಬ್ಬ ಲೇಖಕ ಅಥವ ಲೇಖಕಿಯೊಂದಿಗೆ ಚರ್ಚಿಸುವುದೆಂದರೆ ಹೆಚ್ಚು ಕಡಿಮೆ ಅವರ ಎಲ್ಲಾ ಕೃತಿಗಳ ಒಂದು ಸಾರವನ್ನು ನೀವು ಗ್ರಹಿಸಿದಂತೆಯೇ. ಅಧರ ಜೊತೆಗೆ ಅವರ ಸಾಹಿತ್ಯವನ್ನು ಪ್ರಸ್ತುತತೆಗೆ ಮುಖಾಮುಖಿಯಾಗಿಸಿ ನೋಡುವ, ವಿಮರ್ಶಿಸುವ ಕೆಲಸವೂ ಸಾಗುತ್ತದೆ. ಉಮಾದೇವಿಯವರು ಪಂಥಾತೀತವಾಗಿ ಸಾಹಿತ್ಯ ರಚಿಸುತ್ತಾ, ಸಮಾಜದ ಏಳಿಗೆ ಸ್ತ್ರೀ ಪುರುಷರ ಕೊಡುಗೆಯನ್ನು ಸಮಾನವಾಗಿ ಕಂಡು ಅಭಿವ್ಯಕ್ತಿಸುತ್ತಾ ಬರುತ್ತಿದ್ದಾರೆ. ಮಹಿಳಾ ಸಾಹಿತ್ಯವೂ ಉತ್ಕೃಷ್ಟವಾಗಿ ಬೆಳೆಯುತ್ತಿದೆ. ಹೆಣ್ಣು ಮಕ್ಕಳು ಹೆಚ್ಚಿನ ಮಟ್ಟದ ಶಿಕ್ಷಣ ಪಡೆಯುತ್ತಿರುವುದರಿಂದ ಅವರು ಅಭಿವ್ಯಕ್ತಿ ಮಾಧ್ಯಮದಲ್ಲಿ ತೊಡಗಿಸಿಕೊಳ್ಳಬೇಕು? ಎಂದು ಕರೆಕೊಟ್ಟರು.

ಪ್ರಾಂಶುಪಾಲ ಪ್ರೊ. ಎಂ. ಮಹದೇವಪ್ಪನವರು ಉಪಸ್ಥಿತರಿದ್ದರು. ವಿಭಾಗದ ಮುಖ್ಯಸ್ಥ ಡಾ. ಬಿ.ಎಸ್. ಸುದೀಪ್ ಸ್ವಾಗತಿಸಿದರು.